ಅಲ್ಲದೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ನಿಧಿಯಿಂದ ಪ್ರಾಂಗಣದ ಹೊರಗಡೆ ಇರುವ ಗ್ರಾಮೀಣ ಸಂಪರ್ಕ ರಸ್ತೆಗಳ ಅಭಿವೃದ್ಧಿಯನ್ನು ನಿಯಮ 60(ಸಿ)ಗಳನ್ವಯ ಸಮಿತಿಯ ಆರ್ಥಿಕ ಪರಿಸ್ಥಿತಿಗನುಗುಣವಾಗಿ ಕೈಗೊಳ್ಳಲಾಗುತ್ತಿದೆ.

ಅ) ಮತ್ತು ಇ) ಮಾನ್ಯ ಶಾಸಕರುಗಳಿಂದ ಹಾಗೂ ಇತರರಿಂದ ಸ್ವೀಕರಿಸಿದ ಮನವಿಗಳನ್ನು ಸೂಕ್ತ ಕ್ರಮಕ್ಕಾಗಿ ಪರಿಶೀಲಿಸಲಾಗುತ್ತಿದೆ.

1452(1713) ಶ್ರೀ ಮಲ್ಲಿಕಾರ್ಜುನ್ ಸಿದ್ದರಾಮಪ್ಪ ಖೂಬ(ಬಸವಕಲ್ಯಾಣ) ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೀದರ್ ಜಿಲ್ಲಾ ಬಸವಕಲ್ಯಾಣ ತಾಲ್ಲೂಕಿನಾದ್ಯಂತ ಎ.ಪಿ.ಎಂ.ಸಿ. ಅಡಿಯಲ್ಲಿ ಬರುವ ಗ್ರಾಮೀಣ ರಸ್ತೆಗಳ ತುಂಬಾ ದುಸ್ಥಿತಿಯಲ್ಲಿದ್ದು, ಇದರ ಅಭಿವೃದ್ಧಿಗೆ ಸರ್ಕಾರ ಆದೇಶ ನೀಡಿರುವುದು ನಿಜವಲ್ಲವೇ?

ಆ) ಹಾಗಿದ್ದಲ್ಲಿ ಇದುವರೆವಿಗೂ ರಸ್ತೆಯ ದುರಸ್ತಿಗೆ ಯಾವುದೇ ಕ್ರಮ ಕೈಗೊಳ್ಳದೇ ಇರಲು ಕಾರಣವೇನು?

ಇ) ಕೂಡಲೇ ಗ್ರಾಮೀಣ ಭಾಗದ ರಸ್ತೆಗಳ ದುರಸ್ತಿಗೆ ಎ.ಪಿ.ಎಂ.ಸಿ. ಅನುಧಾನದಡಿಯಲ್ಲಿ ಅನುಧಾನ ಮಂಜೂರು ಮಾಡಿ ರಸ್ತೆ ಅಭಿವೃದ್ಧಿಗೊಳಿಸಿ ಜನತೆಗೆ ಅನುಕೂಲ ಮಾಡಿಕೊಡುವುದು ಯಾವಾಗ?

ಶ್ರೀ ಪ್ರಕಾಶ್ ಭಾ.ಹುಕ್ಕೇರಿ (ಕೃಷಿ ಮಾರುಕಟ್ಟೆ ಸಚಿವರು):

ಅ) ಇಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ) ಕಾಯ್ದೆಯ ನಿಯಮ 60(ಸಿ) ಅಡಿಯಲ್ಲಿ ಸಮಿತಿಯ ಆರ್ಥಿಕ ಪರಿಸ್ಥಿತಿಗನುಗುಣವಾಗಿ ಗ್ರಾಮೀಣ ಸಂಪರ್ಕ ರಸ್ತೆಗಳನ್ನು ನಿಧಿಯಿಂದ ಅಭಿವೃದ್ಧಿಗೊಳಿಸಲು ಅವಕಾಶವಿರುತ್ತದೆ. ಆದ್ದರಿಂದ ಈ ನಿಯಮದಡಿಯಲ್ಲಿ ಗ್ರಾಮೀಣ ರಸ್ತೆಗಳನ್ನು ಅಭಿವೃದ್ಧಿಪಡಿಸಲಾಗುತ್ತದೆ.

1453(1747) ಶ್ರೀ ಮಾಮನಿ ವಿಶ್ವನಾಥ ಕರಬಸಪ್ಪ (ಪರಸಗಡ) ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಪರಸಗಡ ಮತ ಕ್ಷೇತ್ರದ ಗ್ರಾಮಗಳಲ್ಲಿ ಜನಸಂಪರ್ಕ ಸಭೆ ಕೈಗೊಂಡಾಗ ಈ ತಾಲ್ಲೂಕಿನಲ್ಲಿ 2001ರ ಜನಗಣತಿ ಪ್ರಕಾರ ಸರಾಸರಿ ಪ್ರತಿಶತ 73ರಷ್ಟು ಹಳದಿ ಕಾರ್ಡುಗಳ ವಿತರಣೆ ಯಾಗಿದ್ದರೂ ಇನ್ನೂ ಸಾಕಷ್ಟು ಅರ್ಹ ಕುಟುಂಬಗಳು ಹಳದಿ ಪಡಿತರ ಚೀಟಿ ಪಡೆಯುವಲ್ಲಿ ವಂಚಿತರಾಗಿರುವುದು ನಿಜವೇ?

ಆ) ಹಳದಿ ಪಡಿತರ ಚೀಟಿಗಳನ್ನು ಅನರ್ಹ ಫಲಾನುಭವಿಗಳಿಗೆ ವಿತರಣೆಯಾಗಿರುವುದು ಸಹ ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಅನರ್ಹ ಫಲಾನುಭವಿಗಳಿಗೆ ಹಂಚಿಕೆಯಾದ ಹಳದಿ ಪಡಿತರ ಚೀಟಿಗಳ ಮರು ಪರಿಶೀಲನೆ ಮಾಡಿ ಅನರ್ಹ ಹಳದಿ ಪಡಿತರ ಚೀಟಿಗಳನ್ನು ರದ್ದುಪಡಿಸಿ ಅರ್ಹ ಕುಟುಂಬಗಳಿಗೆ ಹಂಚುವಲ್ಲಿ ಸರ್ಕಾರದ ಕ್ರಮಗಳೇನು?